SRI H. D. DEVEGOWDA.—I am unable to understand the type of answer the Hon. Member expects when the Hon.ble Chief Minister has made it clear about the resources position what more I can do ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಮಂತ್ರಿಗಳು ಇಷ್ಟೊಂದು ಸಿಟ್ಟಿಂದ ಎದ್ದು ಹೇಳ ತಕ್ಕ ಅವಶ್ಯಕತೆ ಇಲ್ಲ. ಈ ಸದನದಲ್ಲಿ ಒಬ್ಬರಂ ಸದಸ್ಯರನ್ನಿ ಇನ್ನೊಬ್ಬರು ಹೆದರಿಸುವಂತಹದು ಸರಿಯಲ್ಲ. ಯಾವ ಧಾಟಿಯಲ್ಲಿ ಮಾತನಾಡಬೇಕೋ ಆ ಧಾಟಿಯಲ್ಲಿ ತಾವು ಮಾತನಾಡಬೇಕು.

ಅಧ್ಯಕ್ಷರು.—ಮುಂದೆ ಸರಿಪಡಿಸಿಕೊಳ್ಳೋಣ. ಕುಳಿತುಕೊಳ್ಳಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇಷ್ಟೊಂದು ಸಿಟ್ಟು ಮಂತ್ರಿಗಳಿಗೆ ಏತಕ್ಕೆ ? ಆ ಸಿಟ್ಟು ಯಾರ ಮೇಲೆ ? ಏತಕ್ಕಾಗಿ ?

ಶ್ರೀ ಎಂ, ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಮುಖ್ಯ ಮಂತ್ರಿಗಳು ಹೇಳಿದಂತಹ ಉತ್ತರದ ಮೇಲೆ ಸಿಟ್ಟೋ ಅಥವಾ ಸದಸ್ಯರು ಆ ರೀತಿಯ ಪ್ರಶ್ನೆಯನ್ನು ಕೇಳಿದರಲ್ಲ ಎಂದು ಸಿಟ್ಟೋ ;

ಶ್ರೀ ಹೆಚ್. ಡಿ. ದೇವೇಗೌಡ.—I am sorry Mr. Kharge. ತಾವು ದಯವಾಡಿ ಆ ರೀತಿ ಇನ್‌ಟರ್‌ಪ್ರಿಟೇಷನ್ ಮಾಡಬೇಡಿ. the Hon. Member was present in the House when the Hon. Leader of the House made it clear the resources position of the State. He hes heard it carefully. I cannot help if he is not satisfied with my reply.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆದರೆ ತಾವು ಆ ಧಾಟಿಯಲ್ಲಿ ಹೇಳಿದುದ್ದು ಸರಿಯಲ್ಲ. The tune which you used was not good..... ಎಷ್ಟೋ ಕೇಳುತ್ತಾರೆ. ಹೇಳಿದ್ದು ಅರ್ಥವಾಗಲಿಲ್ಲವೆ ಎಂಬ ಅರ್ಥದಲ್ಲಿ ಹೇಳುವುದು ಸರಿಯಲ್ಲ. We have got a great respect for him because he is a senior leader. ಸದಸ್ಯರು ಕೆಳುವಂತಹ ಪ್ರಶ್ನೆಗೆ ಸಾಜನ್ಯ ರೀತಿಯಲ್ಲಿ ಉತ್ತರವನ್ನು ಹೇಳಬೇಕು.

ಶ್ರೀ ಹೆಚ್. ಡಿ ದೇವೇಗೌಡ.—ಮಾನ್ಯ ಸದಸ್ಯರು ಕರ್ನಾಟಕದ ಜನತೆಗೆ ಮೋಸ ಮಾಡುತ್ತಿದ್ದೀರಿ ಎಂಬುದಾಗಿ ಹೇಳಿದರು. ಅದಕ್ಕೆ ಹೇಳಿದ್ದು ಆ ಉತ್ತರವನ್ನು.

ಹುಮ್ನಾಬಾದ್ ಕ್ಷೇತ್ರದಲ್ಲಿ ಮಾಧ್ಯಮಿಕ ಶಾಲೆ ಪ್ರಾರಂಭಿಸಂವ ಬಗ್ಗೆ

೩೫೯. ಶ್ರೀ ಬಸವರಾಜಪಾಟೀಲ್ ಅನ್ವರಿ(ಹುಮ್ನಾಬಾದ್).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹುಮ್ನಾಬಾದ್ ಕ್ಷೇತ್ರದ ಬಾಂಗ್ಲೇರ, ಕೊಣಬಲ್ ಮತ್ತು ಕಾರವಾಡ ಗ್ರಾಮಂಗಳಲ್ಲಿ ಮಾಧ್ಯಮಿಕ ಶಾಲೆ ಪ್ರಾರಂಭಿಸಲು ಈಗ್ಗೆ ಮೂರೂ ವರ್ಷಗಳಿಂದ ಮನವಿ ಸಲ್ಲಿಸಿರುವುದು ಸರ್ಕಾರ ದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಆ ಬಗ್ಗೆ ಕ್ರಮ ಕೈಗೊಳ್ಳದಿರಲು ಕಾರಣವೇನು ?

ಇ) ಈ ಸಾಲಿನಲ್ಲಾದರೂ ಅಲ್ಲಿ ಮಾಧ್ಯಮಿಕ ಶಾಲೆಯಂನ್ನು ಪ್ರಾರಂಭಿಸಲಾಗುವುದೇ ?

ಶ್ರೀ ಜೀವರಾಜ ಆಳ್ವ (ಶಿಕ್ಷಣ ಮಂತ್ರಿಗಳು).—

ಅ) ಬಂದಿದೆ. (೮೫–೮೬ ರಲ್ಲಿ ಪ್ರಸ್ತಾವನೆ ಬಂದಿರಲಿಲ್ಲ. ೮೬–೮೭, ೮೭–೮೮ನೇ ಸಾಲಿನಲ್ಲಿ ಬಂದಿತ್ತು)

ಆ) ಸಾಧಾರಣವಾಗಿ ೮೫–೮೬ ಮತ್ತು ೮೬–೮೭ನೇ ಸಾಲಿಗೆ ಯಾವುದೇ ಪ್ರೌಢಶಾಲೆಗಳ ಮಂಜೂರಾತಿ ಮಾಡಿರುವುದಿಲ್ಲ.

ಇ) ೮೭-೮೮ನೇ ಸಾಲಿನಿಂದ ಗ್ರಾಮಾಂತರ ಪ್ರೌಢಶಾಲೆಗಳನ್ನು ಆಯಾ ಜಿಲ್ಲಾ ಪರಿಷತ್ತಿನ ವ್ಯಾಪ್ತಿಗೆ ವಹಿಸಿದೆ. ಆದಕಾರಣ ಇನ್ನು ಮುಂದೆ ಆಯಾ ಜಿಲ್ಲಾ ಪರಿಷತ್ತುಗಳೇ ಮಾಧ್ಯಮಿಕ ಶಾಲೆಗಳನ್ನು ಪ್ರಾರಂಭಿಸುವ ಕಾರ್ಯವನ್ನು ಮಾಡುತ್ತವೆ.

ಶ್ರೀ ಬಸವರಾಜ್ ಪಾಟೀಲ್.—ಈಗ ನಮ್ಮ ಪರಿಸ್ಥಿತಿ ಹೇಗಿದೆ ಎಂದರೆ, ಗಂಡ ಹೆಂಡತಿ ಜಗಳದಲ್ಲಿ ಕೂಸು ಬಡವಾಯಿತು ಎಂಬ ಗಾದೆಯಂತೆ, ಆಗಿ ಈಗ ಇವರು ಜಿಲ್ಲಾ ಪರಿಷತ್ತು ಎಂಬುದಾಗಿ ಇವರು ಹೇಳುತ್ತಾರೆ. ಆದರೆ ಜಿಲ್ಲಾ ಪರಿಷತ್ತಿನವರು ಯಾವುದನ್ನು ಮಾಡಬೇಕೆಂಬುದಾಗಿ ಗೊತ್ತಿಲ್ಲ. ೪-೫ ವರ್ಷಗಳಿಂದಲೂ ಈ ಸರ್ಕಾರದಲ್ಲಿ ಯಾವುದನ್ನೂ ಕೇಳಿದರೂ ಅದಕ್ಕೆ ಫಂಡ್ಸ್ ಇಲ್ಲವೇ ಇರುವುದರಿಂದ ಯಾವುದನ್ನೂ ಮಾಡಿಲ್ಲ, ಇವರು ಹೇಳಿದ ಪ್ರಕಾರ ಜಿಲ್ಲಾ ಪರಿತ್ತಿನಲ್ಲಿ ಕೇಳಿದರೆ, ಅವರು ಹೇಳುತ್ತಾರೆ, ನೀವು ಶಾಸಕರು ಇದ್ದೀರಿ, ಸರ್ಕಾರದಲ್ಲಿ ಮಾತನಾಡಿ ನಮಗೆ ಹಣಕಾಸಿನ ನೆರವನ್ನು ಕೊಡುವಂತೆ ಏರ್ಪಾಡು ಮಾಡಿ ಎಂಬುದಾಗಿ, ಇದರ ಬಗ್ಗೆ ಸವಿಸ್ತಾರವಾಗಿ ಉತ್ತರವನ್ನು ಮಾನ್ಯ ಮಂತ್ರಿಗಳು ತಿಳಿಸುವರೆ?

ಶ್ರೀ ಬಿ. ಸೋಮಶೇಖರ್.—ಈಗಾಗಲೇ ಆ ಬಗ್ಗೆ ತೀರ್ಮಾನವನ್ನು ಸಚಿವ ಸಂಪುಟ ತೆಗೆದು ಕೊಂಡಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಪ್ರೌಢಶಾಲೆಗಳನ್ನು ಮಂಜೂರು ಮಾಡತಕ್ಕ ಹಕ್ಕು ಜಿಲ್ಲಾ ಪರಿಷತ್ತಿಗೆ ಇದೆ ಎಂಬ ಆದೇಶವನ್ನು ಈಗಾಗಲೇ ಹೊರಡಿಸಿದ್ದೇವೆ. ಆವರ ಪ್ರಕಾರ ಜಿಲ್ಲಾ ಪರಿಷತ್ತಿನವರೇ ಪರಿಶೀಲಿಸಿ ಎಲ್ಲಿ ಪ್ರೌಢಶಾಲೆಗಳನ್ನು ಮಂಜೂರು ಮಾಡಬಹುದೆಂಬುದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬಹುದು.

ಅಧ್ಯಕ್ಷರು.—ಮುಂದಿನ ಪ್ರಶ್ನೆಯನ್ನು ತೆಗೆದುಕೊಳ್ಳೋಣ. ಶ್ರೀಮತಿ ನಾಗರತ್ನಮ್ಮನವರೇ ತಮ್ಮ ಪ್ರಶ್ನೆಯನ್ನು ಕೇಳಿ.

ಯಗಚಿ ಯೋಜನೆಯ ಬಗ್ಗೆ

೩೪೭. ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ) —ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಾಸನ ಜಿಲ್ಲೆಯ ಯಗಚಿ ಯೋಜನೆಯಲ್ಲಿ ಮಂಳುಗಡೆಯಾಗಿರುವ ಒಟ್ಟು ಗ್ರಾಮಗಳ ಸಂಖ್ಯೆ ಎಷ್ಟು?

ಆ) ಸದರಿ ಗ್ರಾಮಗಳ ಜನತೆಯ ಪುನರ್‌ವಸತಿಗಾಗಿ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು? ಹಾಗೂ ಇದಕ್ಕಾಗಿ ಈವರೆಗೂ ಖರ್ಚಾಗಿರುವ ಒಟ್ಟು ಹಣವೆಷ್ಟು?

ಇ) ಯಗಚಿ ಯೋಜನೆಯ ಕಾಮಗಾರಿಯ ಪ್ರಗತಿ ಈಗ ಯಾವ ಹಂತದಲ್ಲಿದೆ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಹನ್ನೆರಡು,

ಆ) ಪುನರ್‌ವಸತಿ ಸಮಿತಿ ರಚನೆ ಮಾಡಿರುವುದು, ಪುನರ್‌ವಸತಿಗಾಗಿ ಅಗತ್ಯವಿರುವ ಭೂಸ್ವಾಧೀನಪಡಿಸಿಕೊಳ್ಳಲು ವ್ಯವಹರಿಸಲಾಗುತ್ತಿರುವುದು, ಪುನರ್‌ವಸತಿ ಕಲ್ಪಿಸಲು ಭಾಗಶಃ ವಸಾಹತುಗಳನ್ನು ಗುರುತಿಸಲಾಗಿರುವುದು.

ಇ) ಅಣೆಕಟ್ಟಿನ ಕಾಮಗಾರಿಗಳಿಗೆ ಗುತ್ತಿಗೆದಾರರನ್ನು ನಿಗದಿಪಡಿಸಲಾಗಿದೆ. ಹಾಗೂ ಯೋಜನೆಯ ಪೂರ್ವ ಭಾವಿ ಕೆಲಸಗಳು ಪ್ರಗತಿಯಲ್ಲಿದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅಧ್ಯಕ್ಷರೇ ನನಗೆ ಪ್ರಶ್ನೆ ಕೇಳುವುದಕ್ಕೆ ನಾಚಿಕೆಯಾಗುತ್ತದೆ. ಹಿಂದೆ ಒಂದು ಪ್ರಶ್ನೆಗೆ ಉತ್ತರಿಸುವ ಸಮಯದಲ್ಲಿ ಮಾನ್ಯ ದೇವೇಗೌಡರು ಮಾತನಾಡಿ ರಿಸೋರ್ಸಸ್ ಇಲ್ಲ ಎಂದು ಮುಖ್ಯಮಂತ್ರಿಗಳು ಹೇಳಿದ್ದುದನ್ನು ಕೇಳಿದ್ದೀರಾ ಎಂದು ಉತ್ತರ ಕೊಟ್ಟರು. ಆ ರೀತಿ ನನ್ನನ್ನು ಹೆದರಿಸುವುದು ಬೇಡ, ನಾನು ಅದಕ್ಕೆ ಹೆದರುವವಳಲ್ಲ. ಈ ಒಂದು ಯೋಜನೆಯ ಖರ್ಚು ಎಷ್ಟು? ೧೯೮೪-೮೫ ರಿಂದ ೮೭-೮೮ ರವರೆಗೆ ತಾವು ಬೆಳೆ ಪರಿಹಾರವನ್ನಿ ಕೊಟ್ಟಿದ್ದೀರಾ?